# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿರುವ ಮದರಸಗಳಿಗೆ ಆಧುನೀಕರಣ, ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ನೀಡಲು ಅನುದಾನ ಮಂಜೂರು ಮಾಡಸುವ ಬಗ್ಗೆ

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ಎಂಬ್ಲ್ಯೂಡಿ 175 ಎಂಡಿಎಸ್ 2017, ದಿನಾಂಕ:03.01.2017

2) ಸರ್ಕಾರದ ಆದೇಶ ಸಂಖ್ಯೆ:ಎಂಬ್ಲ್ಯೂಡಿ 175 ಎಂಡಿಎಸ್ 2017, ದಿನಾಂಕ:04.01.2017

3) ಸರ್ಕಾರದ ಆದೇಶ ಸಂಖ್ಯೆ:ಎಂಬ್ಲ್ಯೂಡಿ 175 ಎಂಡಿಎಸ್ 2017, ದಿನಾಂಕ:27.01.2017

<u>ಪ್ರಸ್ತಾವನೆ:</u>

2016-17ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ-206ರಲ್ಲಿ ರೂ.50.00 ಕೋಟಿಗಳ ವೆಚ್ಚದಲ್ಲಿ ರಾಜ್ಯದಲ್ಲಿನ ಮದರಸಗಳಿಗೆ ಆಧುನೀಕರಣ, ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ನೀಡಲು ಘೋಷಿಸಿರುತ್ತಾರೆ.

ಮುಸ್ಲಿಂ ಸಮುದಾಯದಲ್ಲಿ ಧಾರ್ಮಿಕ ಅಧ್ಯಯನಕ್ಕೆ ಆದ್ಯತೆ ನೀಡಲಾಗಿದ್ದು, ಧಾರ್ಮಿಕ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿ ಕಡ್ಡಾಯವಾಗಿ ನೀಡಲಾಗುತ್ತಿದೆ. ಈ ಸಮುದಾಯದ ಮಕ್ಕಳು ಸ್ಥಳೀಯ ಮಸೀದಿಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯ ಮದರಸಗಳು ಅಸಂಘಟಿತ ವ್ಯವಸ್ಥೆಯಲ್ಲಿದ್ದು, ಮೂಲಭೂತ ಸೌಲಭ್ಯಗಳಾದ ನೀರು, ಶೌಚಾಲಯ, ವಸತಿ ಸೌಲಭ್ಯ, ಭೋದಕ/ಭೋದಕೇತರ ಸಿಬ್ಬಂದಿಗಳ ಕೊರತೆ, ಪೀಠೋಪಕರಣಗಳ, ಗಣಕಯಂತ್ರ ಮತ್ತು ಗ್ರಂಥಾಲಯ ಮುಂತಾದ ಸೌಲಭ್ಯಗಳಿಂದ ವಂಚಿತವಾಗಿವೆ.

ರಾಜ್ಯದಲ್ಲಿನ ಮದರಸಗಳು ಮುಸ್ಲಿಂ ಸಮುದಾಯದ ಮಕ್ಕಳಿಗೆ ಧಾರ್ಮಿಕ ಶಿಕ್ಷಣವನ್ನು ಭೋದಿಸುತ್ತಿದ್ದು, ಇಂತಹ ಸುಮಾರು ಹತ್ತು ಸಾವಿರಕ್ಕಿಂತಲೂ ಹೆಚ್ಚಿನ ಮದರಸಗಳು ರಾಜ್ಯದಲ್ಲಿದ್ದು, ಈ ಮಕ್ಕಳಲ್ಲಿ ಕೆಳಕಂಡ ಕೊರತೆಗಳನ್ನು ಗಮನಿಸಬಹುದಾಗಿದೆ.

1 ನೀರು, ಶೌಚಾಲಯ, ವಸತಿ ಸೌಲಭ್ಯ, ಭೋದಕ/ಭೋದಕೇತರ ಸಿಬ್ಬಂದಿಗಳ ಕೊರತೆ, ಪೀಠೋಪಕರಣಗಳ, ಗಣಕಯಂತ್ರ ಮತ್ತು ಗ್ರಂಥಾಲಯದ ಕೊರತೆ ಇರುತ್ತದೆ.

2 ಮದರಸಗಳಲ್ಲಿ ವಿದ್ಯಾರ್ಥಿಗಳ ಔಪಚಾರಿಕ ಶಿಕ್ಷಣ, ಕಂಪ್ಯೂಟರ್ ಶಿಕ್ಷಣ ಮತ್ತು ದೈಹಿಕ ಆರೋಗ್ಯಕ್ಕೆ ಕ್ರೀಡಾಚಟುವಟಿಕೆಗಳ ಪ್ರೋತ್ಸಾಹದ ಕೊರತೆ ಇರುತ್ತದೆ.

3 ಮದರಸಗಳು ಧಾರ್ಮಿಕ ಶಿಕ್ಷಣ ಭೋದಿಸುತ್ತಿದ್ದು, ಸಮಾಜದಲ್ಲಿ ಮಕ್ಕಳು ವಿಚಾರವಂತರಾಗಿ ಬುದ್ಧಿಜೀವಿಗಳಾಗಿ ಬೆಳವಣಿಗೆ ಹೊಂದಲು ಸಹಕಾರಿಯಾಗಿವೆ.

D/SHRI-2019-20/US/KGO

ರಾಜ್ಯದಲ್ಲಿನ ಎಲ್ಲಾ ಮದರಸಗಳನ್ನು ಆಧೂನೀಕರಣಗೊಳಿಸಲು, ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಈ ಹಿಂದೆ ಮೇಲೆ ಓದಲಾದ (1) ರಿಂದ (3) ರಲ್ಲಿರುವ ಸರ್ಕಾರದ ಆದೇಶಗಳನ್ನು ಹೊರಡಿಸಲಾಗಿದ್ದು, ಪ್ರಸಕ್ತ ಸನ್ನಿವೇಶದಲ್ಲಿ ಮೇಲ್ಕಂಡ ಆದೇಶಗಳನ್ನು ಸಾಕಷ್ಟು ತಿದ್ದುಪಡಿ ಮಾಡಬೇಕಾದ ಅಗತ್ಯತೆ ಇರುವುದರಿಂದ ಈ ಎಲ್ಲಾ ಆದೇಶಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: **MWD 45 WES 2019**, ದಿನಾಂಕ:11.10.2019

ರಾಜ್ಯದಲ್ಲಿ ನಡೆಸಲಾಗುತ್ತಿರುವ ಮುಸ್ಲಿಂ ಸಮುದಾಯದ ನೋಂದಾಯಿತ ವಕ್ಫ್ ಆಸ್ತಿಗಳಲ್ಲಿ ಹಾಗೂ ವಕ್ಫ್ ಸಂಸ್ಥೆಗಳಿಂದ ನಡೆಸಲಾಗುತ್ತಿರುವ ಮದರಸಗಳನ್ನು ಆಧುನೀಕರಣಗೊಳಿಸಲು, ಔಪಚಾರಿಕ ಶಿಕ್ಷಣ ಹಾಗೂ ಗಣಕಯಂತ್ರ ಶಿಕ್ಷಣ ನೀಡಲು ಅಗತ್ಯವಿರುವ ಮೂಲಭೂತ ಸೌಲಭ್ಯಗಳಾದ ನೀರು, ಶೌಚಾಲಯ, ವಸತಿ ಸೌಲಭ್ಯಗಳ ಕೊರತೆ ಪೀಠೋಪಕರಣಗಳ, ಗಣಕಯಂತ್ರ ಮತ್ತು ಗ್ರಂಥಾಲಯದ ಸೌಲಭ್ಯಗಳನ್ನು ಒದಗಿಸಲು ಕೆಳಕಂಡ ಷರತ್ತಿಗೊಳಪಟ್ಟು ಒಂದು ಬಾರಿಗೆ ಮಾತ್ರ ರೂ.10.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಆದೇಶಿಸಲಾಗಿದೆ.

ಷರತ್ತುಗಳು:

1. ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರು ರಾಜ್ಯದಲ್ಲಿನ ಅಲ್ಪಸಂಖ್ಯಾತರ ಸಮುದಾಯದ ಒಟ್ಟು ಜನಸಂಖ್ಯೆಯಲ್ಲಿ ಮದರಸಗಳ ಆಧುನೀಕರಣಕ್ಕೆ ಸಂಬಂಧಿಸಿದಂತೆ, ಜನಸಂಖ್ಯಾ ಆಧಾರದಲ್ಲಿ ಶೇಕಡವಾರು ಗುರಿ ನಿರ್ಧರಿಸಿ ಭೌತಿಕ ಗುರಿಯನ್ನು ನಿಗಧಿಪಡಿಸಿ ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
2. ಯಾವುದೇ ಜಿಲ್ಲೆಗೆ ಆಯಾ ಜಿಲ್ಲೆಯ ಮುಸ್ಲಿಂ ಸಮುದಾಯದ ಜನಸಂಖ್ಯೆಯ ಶೇಕಡವಾರು ಎರಡು ಪಟ್ಟು ಮೀರದಂತೆ ಗುರಿ ನಿಗಧಿಪಡಿಸತಕ್ಕದ್ದು.
3. ಅನುದಾನ ಪಡೆಯಲು ಇಚ್ಛಿಸಿರುವ ಸಂಸ್ಥೆಗಳು ವಕ್ಫ್ ಮಂಡಳಿಯಲ್ಲಿ ಕಡ್ಡಾಯವಾಗಿ ನೋಂದಣಿಯಾಗಿರಬೇಕು.
4. ಸಂಸ್ಥೆಯು ಅಥವಾ ವಕ್ಫ್ ಸಂಸ್ಥೆಯು ಸ್ವಂತ ಕಟ್ಟಡವನ್ನು ಹೊಂದಿರತಕ್ಕದ್ದು.
5. ಪ್ರತಿಯೊಂದು ಮದರಸಗಳಲ್ಲಿ ಕನಿಷ್ಠ 10 ಮಕ್ಕಳ ದಾಖಲಾತಿ ಸಂಖ್ಯೆ ಕಡ್ಡಾಯವಾಗಿರತಕ್ಕದ್ದು.
6. ಈ ಯೋಜನೆಗೆ ಪ್ರಾಥಮಿಕ ಹಂತದಲ್ಲಿ ಪ್ರಸ್ತಾವನೆಗಳನ್ನು ಎಲ್ಲಾ ವಕ್ಫ್ ಅಧಿಕಾರಿಗಳು ಇವರು ಪಡೆದು ಅಲ್ಪಸಂಖ್ಯಾತರ ನಿರ್ದೇಶನಾಲಯದ ಜಿಲ್ಲಾ ಅಧಿಕಾರಿಗಳ ಮುಖಾಂತರ ಸಲ್ಲಿಸತಕ್ಕದ್ದು.

..3.